ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು)

ಅ) ಗ್ರಾಮ ಮಟ್ಟದವರೆಗಿನ ಎಲ್ಲಾ ಆರ್ ಟಿ ಸಿ ಗಳನ್ನು ಗಣಕೀಕರಣ ಗೊಳಿಸಲಾಗಿದ್ದು, ರಾಜ್ಯದ ಎಲ್ಲಾ ತಾಲ್ಲೂಕುಗಳಲ್ಲಿ ಗಣಕೀಕೃತ ಆರ್ ಟಿ ಸಿ ಗಳು ಲಭ್ಯವಿದೆ ಸರ್ಕಾರವು "ನೆಮ್ಮದಿ" ಎಂಬ ಹೊಸ ಯೋಜನೆಯೊಂದನ್ನು ಪ್ರಾರಂಭಿಸಿದ್ದು, ಹೋಬಳಿಯ ಮಟ್ಟದ ಈ ಕೇಂದ್ರಗಳಿಂದ ಗಣಕೀಕೃತ ಪಹಣಿಗಳು ಲಭ್ಯವಾಗಲಿದೆ ಪಹಣಿಗಳಲ್ಲದೆ ಉಳಿದ ಕಂದಾಯ ದಾಖಲೆಗಳನ್ನು ಯುಕ್ತ ಕಾಲದಲ್ಲಿ ಗಣಕೀಕರಣಗೊಳಿಸಲಾಗುವುದು

ಆ) ಎಲ್ಲಾ ಹೋಬಳಿಗಳ ಆರ್ ಟಿ ಸಿ ದಾಖಲೆಗಳನ್ನು ಗಣಕೀಕೃತ ಗೊಳಿಸಲಾಗಿದೆ

ಇ) ಪಹಣಿಗಳ ಜೊತೆಗೆ ಜನನ ಮರಣ ಪ್ರಮಾಣ ಪತ್ರ ಜಾತಿಯ ಪ್ರಮಾಣ ಪತ್ರಗಳನ್ನು ಗಣಕೀಕೃತಗೊಳಿಸಲು ಸಾಧ್ಯ ಅದನ್ನು "ನೆಮ್ಮದಿ" ಯೋಜನೆಯಡಿ ಕಾರ್ಯಗತಗೊಳಿಸಲಾಗುತ್ತಿದೆ ವಾರಸುದಾರರ ದೃಢೀಕರಣ ಪತ್ರಗಳ ವಿತರಣೆ ಕಂದಾಯ ಇಲಾಖೆ ವ್ಯಾಪ್ತಿಗೆ ಬರುವುದಿಲ್ಲ ಆದರೆ ಮೃತರ ಕುಟುಂಬದ ಜೀವಂತ ಸದಸ್ಯರ ದೃಢೀಕರಣ ಪತ್ರವನ್ನು ಇಲಾಖೆಯಿಂದ ವಿತರಿಸಲಾಗುತ್ತಿದ್ದು, ಇದನ್ನು "ನೆಮ್ಮದಿ" ಯೋಜನೆಯಡಿ ಗಣಕೀಕರಣ ಗೊಳಿಸಲಾಗುತ್ತಿದೆ

804 (891) ಶ್ರೀ ಸಿದ್ದು ಸಾವದಿ (ಜಮಖಂಡಿ) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಈ ರಾಜ್ಯದಲ್ಲಿ ಇದುವರೆವಿಗೂ ಎಷ್ಟು ತಾಲ್ಲೂಕುಗಳಿಗೆ ಮಿನಿ ವಿಧಾನಸೌಧ ಕಟ್ಟಡ ಮಂಜೂರಾತಿ ನೀಡಲಾಗಿದೆ ,

ಆ) ಜಮಖಂಡಿಗೆ ಮಿನಿ ವಿಧಾನಸೌಧದ ಕಟ್ಟಡ ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ , ಹಾಗಿದ್ದಲ್ಲಿ ಯಾವಾಗ ಮಂಜೂರಾತಿ ನೀಡಲಾಗುವುದು ,

ಇ) ಹಲವು ಇಲಾಖೆಗಳ ಬಹಳಷ್ಟು ಕಛೇರಿಗಳು ಇನ್ನೂ ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ,

ಈ) ಬಂದಿದ್ದರೆ, ಎಂದಿನಿಂದ ಕಟ್ಟಡವನ್ನು ಪ್ರಾರಂಭಿಸಲಾಗುವುದು ?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು)

ಅ) ರಾಜ್ಯದಲ್ಲಿ ಇದುವರೆವಿಗೂ 100 ತಾಲ್ಲೂಕುಗಳಿಗೆ ಮಿನಿ ವಿಧಾನಸೌಧ ಕಟ್ಟಡ ಮಂಜೂರಾತಿ ನೀಡಲಾಗಿದೆ

ಆ) ಸರ್ಕಾರದ ಗಮನಕ್ಕೆ ಬಂದಿದೆ

ಇ) ಸರ್ಕಾರದ ಗಮನಕ್ಕೆ ಬಂದಿದೆ

ಈ) ಅನುದಾನದ ಲಭ್ಯತೆಯನ್ನು ಆಧರಿಸಿ ಜಮಖಂಡಿ ತಾಲ್ಲೂಕಿನಲ್ಲಿ ಮಿನಿ ವಿಧಾನಸೌಧ ನಿರ್ಮಾಣ ಮಾಡಲು ಕ್ರಮ ಕೈಗೊಳ್ಳಲಾಗುವುದು

805 (1201) ಶ್ರೀ ಸಿದ್ದುಸಾವದಿ (ಜಮಖಂಡಿ) ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದ ಬೊಕ್ಕಸಕ್ಕೆ ರಸ್ತೆ ಕೆನಾಲ ಕಾಮಗಾರಿ ಮತ್ತು ಕಟ್ಟಡ ಕಾಮಗಾರಿಗಳ ಗುತ್ತಿಗೆದಾರರಿಂದ ಬರುವ ವಿವಿಧ ತೆರಿಗೆಗಳ ಮೊತ್ತವೆಷ್ಟು ,

ಆ) ರಸ್ತೆ, ಕಾಲುವೆ, ಕಟ್ಟಡಗಳನ್ನು ನಿರ್ಮಿಸುವ ಗುತ್ತಿಗೆದಾರರಿಗೆ ಆಕರಣೆ ಮಾಡುವ ರಾಜ್ಯ ಮತ್ತು ಕೇಂದ್ರ ತೆರಿಗೆಗಳಾವುವು ಹಾಗೂ ಎಷ್ಟು ಪ್ರಮಾಣ ಆಕರಣೆ ಮಾಡಲಾಗುವುದು ,

ಇ) ಯಾವ ರೀತಿ ಗುತ್ತಿಗೆದಾರರಿಂದ ಕರ ಆಕರಣೆ ಮಾಡಲಾಗುತ್ತಿದೆ ಮತ್ತು ಇಲ್ಲಿಯವರೆಗೆ ರಾಜ್ಯದಲ್ಲಿ ಗುತ್ತಿಗೆದಾರರಿಂದ ಆಕರಣೆ ಮಾಡದೇ ಇರುವ ಪ್ರಕರಣಗಳು ಎಷ್ಟು ,

ಈ) ಯಾವಾಗ ಮತ್ತು ಹೇಗೆ ಆಕರಣೆ ಮಾಡಲಾಗುವುದು ,

ಉ) ಸರ್ಕಾರಿ ಕೆಲಸ ಕಾರ್ಯಗಳಿಗೆ ರಸ್ತೆ, ಕೆನಾಲ ಮತ್ತು ಶಾಲೆ ಕಟ್ಟಡಗಳ ಕೆಲಸಗಳಿಗೆ ಸರ್ಕಾರ ಆಕರಣೆ ಮಾಡುವ ರೀತಿಯಲ್ಲಿ ರಿಯಾಯಿತಿ ಮಾಡುವ ಯೋಜನೆ ಇದೆಯೇ ,

ಊ) ಹಾಗಿಲ್ಲದಿದ್ದಲ್ಲಿ, ಮಂಜೂರು ಹಂತದಲ್ಲಿಯೇ ಗುತ್ತಿಗೆದಾರನ ತೆರಿಗೆ ಮತ್ತು ರಾಯಲ್ಟಿಗಳಂತಹ ಕರಗಳನ್ನು ಮುರಿದು ಕೈಗೊಳ್ಳಲಾಗುವುದೇ ?

ಶ್ರೀ ಬಿ ಎಸ್ ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು)

ಅ) 2006–07ನೇ ಸಾಲಿನಲ್ಲಿ (ಏಪ್ರಿಲ್ 2006 ರಿಂದ ಜನವರಿ 2007 ರವರೆಗೆ) ರಾಜ್ಯದ ಬೊಕ್ಕಸಕ್ಕೆ ರಸ್ತೆ ಕಾಲುವೆ ಮತ್ತು ಕಟ್ಟಡ ಕಾಮಗಾರಿಗಳಿಂದ ಸುಮಾರು ರೂ 286 00 ಕೋಟಿ ಮೌಲ್ಯವರ್ಧಿತ ತೆರಿಗೆ ಸಂಗ್ರಹವಾಗಿರುತ್ತದೆ

ಆ) ರಸ್ತೆ, ಕಾಲುವೆ ಮತ್ತು ಕಟ್ಟಡಗಳನ್ನು ನಿರ್ಮಿಸುವ ಗುತ್ತಿಗೆದಾರರಿಗೆ ಕಾಮಗಾರಿಯಲ್ಲಿ ಉಪಯೋಗಿಸಲಾದ ಸರಕುಗಳ ತೆರಿಗೆದಾಯಕ ವಹಿವಾಟಿನ ಮೇಲೆ ಶೇ 12 5% ರಷ್ಟು ಮೌಲ್ಯವರ್ಧಿತ ತೆರಿಗೆ ಇರುತ್ತದೆ ಗುತ್ತಿಗೆದಾರರು ರಾಜೀತೆರಿಗೆ ಸೌಲಭ್ಯದಲ್ಲಿ ತೆರಿಗೆ ಪಾವತಿಸಲು ಆಯ್ಕೆ ಮಾಡಿದ್ದಲ್ಲಿ ಗುತ್ತಿಗೆಯ ಒಟ್ಟು ಮೌಲ್ಯದ ಮೇಲೆ ಶೇ 4 ರಷ್ಟು ತೆರಿಗೆ ಬಾಧ್ಯತೆ ಇರುತ್ತದೆ (ಕೇಂದ್ರ ತೆರಿಗೆಗಳ ವಿವರ ಲಭ್ಯವಿರುವುದಿಲ್ಲ)

ಇ) ರಾಜ್ಯದಲ್ಲಿ ಕಾಮಗಾರಿ ಕೈಗೊಳ್ಳುವ ಗುತ್ತಿಗೆದಾರರು ಕನಾಟಕ ವೌಲ್ಯವರ್ಧಿತ ತೆರಿಗೆ ಕಾಯ್ದೆಯಡಿಯಲ್ಲಿ ಕಡ್ಡಾಯವಾಗಿ ನೋಂದಣಿ ಪಡೆಯಬೇಕಾಗುತ್ತದೆ ಅವರು ತಮ್ಮ ವಾರ್ಷಿಕ ವಹಿವಾಟು ರೂ 15 ಲಕ್ಷಕ್ಕಿಂತ ಕಡಿಮೆ ಇದ್ದಲ್ಲಿ ಮೂರು ತಿಂಗಳಿಗೊಮ್ಮೆ ಹಾಗೂ ಅದನ್ನು ಮೀರಿದ್ದಲ್ಲಿ ಅಧವಾ